**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ.1654/2025

ಫಿರ್ಯಾದುದಾರರು ಸಾಗರ ಗ್ರಾಮಾಂತರ ಪೊಲೀಸ್.

ವಿರುದ್ಧ

ಆರೋಪಿತರುಃ- ಬಾಲಚಂದ್ರ ಬಿನ್ ಎಲ್.ಎಸ್. ಮಂಜಪ್ಪ.

| | | |
|---|---|---|
| 1 ನೇ ಆರೋಪಿತನ ಹೆಸರು | - | ಬಾಲಚಂದ್ರ. |
| ತಂದೆಯ ಹೆಸರು | - | ಎಲ್.ಎಸ್. ಮಂಜಪ್ಪ. |
| ವಯಸ್ಸುಃ | - | 56 ವರ್ಷ |
| ಉದ್ಯೋಗ | - | ವ್ಯವಸಾಯ. |
| ವಾಸ | - | ಮಡಸೂರು ಲಿಂಗದಹಳ್ಳಿ ಗ್ರಾಮ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

## ದೋಷಾರೋಪಣೆ

ಸಾಗರದ *1* ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ದೀಪ ಕೆ.ಆರ್., ಬಿ.ಎ.ಎಲ್. ಎಲ್‌ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆ ಹೊರಿಸುತ್ತೇನೆ.

ದಿನಾಂಕಃ ***04.05.2021*** ರಂದು ಸಂಜೆ ಸುಮಾರು ***5.00*** ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು ಮಡಸೂರು-ಲಿಂಗದಹಳ್ಳಿ ಗ್ರಾಮದ ಸರ್ವೇ ನಂ.***68***/ಎ ***3*** ರ ಚಾಸಾ-***01*** ರವರ ಸ್ವಾಧೀನ ಅನುಭವದಲ್ಲಿರುವ ಖಾನೆ ಶುಮಾರಿ ಜಮೀನಿನಲ್ಲಿ ಆರೋಪಿಯಾದ ನೀವು ಚಾಸಾ-***01*** ರವರ ಜಮೀನಿಗೆ ಕೂಲಿ ಆಳುಗಳನ್ನು ಕರೆದುಕೊಂಡು ಬಂದು ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***447*** ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-***01*** ರವರ ಜಮೀನಿನಲ್ಲಿ ಕಂಬನೆಟ್ಟು, ಬೇಲಿ ಕಟ್ಟಲು ಮುಂದಾದಾಗ ಚಾಸಾ-***01*** ರವರು ಹೋಗಿ ಈ ಜಾಗ ನಮಗೆ ಸೇರಿದ್ದು ಅಂತ ಹೇಳಿದಾಗ ಆರೋಪಿಯಾದ ನೀವು ಏನೋ ಸೂಳೇ ಮಗನೇ, ನೀನ್ಯಾರು ಕೇಳಲು ಅಂತ ಅವಾಚ್ಯವಾಗಿ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***504*** ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ವಿಚಾರವಾಗಿ ಅಲ್ಲಿಯೇ ಇದ್ದ ಒಂದು ಕೋಲನ್ನು ತೆಗೆದುಕೊಂಡು ಚಾಸಾ-*01* ರವರ ಬಲಗಾಲಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***324*** ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಮೇಲ್ಕಂಡ ವಿಚಾರವಾಗಿ ಆರೋಪಿತನಾದ ನೀವು, ಚಾಸಾ-*01* ರವರಿಗೆ ನೀನು ಹೋಗದಿದ್ದರೆ ಆಳುಗಳ ಸಹಾಯದಿಂದ ನಿನ್ನನ್ನು ಕೊಲೆ ಮಾಡಿ, ಇಲ್ಲಿಯೇ ಹೂತು ಹಾಕುತ್ತೇನೆ ಅಂತ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ ***506*** ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಆದ್ದರಿಂದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದೆ.

ದಿನಾಂಕಃ 16.12.2025

(ದೀಪ ಕೆ.ಆರ್.)
1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.